## 20.ಸ.ಹಿ.ಪ್ರಾ ಶಾಲೆ ಹಾರೋಗೊಳಿಗೆ

ತೀರ್ಥಹಳ್ಳಿ ತಾಲೂಕಿನ ಸ.ಹಿ.ಪ್ರಾ ಶಾಲೆ ಹಾರೋಗೊಳಿಗೆ, ಇದು 4 ಶಿಕ್ಷಕರು ಮತ್ತು 48 ಮಕ್ಕಳನ್ನು ಹೊಂದಿರುವ ಶಾಲೆಯಾಗಿದೆ. 1944ರಲ್ಲಿ ಈ ಶಾಲೆ ಪ್ರಾರಂಭವಾಗಿ ಸಾಕಷ್ಟು ವಿದ್ಯಾರ್ಥಿ–ವಿದ್ಯಾರ್ಥಿನಿಯರು ವ್ಯಾಸಂಗ ಮಾಡಿದ್ದು, ಶಾಲೆಯು ತಾಲ್ಲೂಕು ಕೇಂದ್ರದಿಂದ 13 ಕಿ. ಮೀ ದೂರದಲ್ಲಿದ್ದು ಸೃಷ್ಟಿಯ ಸೊಬಗಿನ ರಮಣೀಯ ಪರಿಸರದ ನಡುವೆ ಕಂಗೊಳಿಸುತ್ತಿದೆ. ದಟ್ಟ ಕಾನನದ ನಡುವೆಯಿಂದ ಬರುತ್ತಿರುವ ನೂರಾರು ಮಕ್ಕಳಿಗೆ ವಿದ್ಯಾರ್ಜನೆ ನೀಡುತ್ತಾ ಬಂದಿದ್ದು, ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಶಾಲೆಯು ಬ್ರಿಟಿಷರ ಅಧಿಕಾರಾವಧಿಯಲ್ಲಿ ಇಂಗ್ಲೀಷ್ ಅಕ್ಷರ 'ಯು' ಆಕಾರದಲ್ಲಿ ನಿರ್ಮಾಣವಾಗಿರುತ್ತದೆ. ಆರಂಭದಲ್ಲಿ ಮಕ್ಕಳ ಸತತ ಗೈರು ಹಾಜರು, ಪೋಷಕರಲ್ಲಿ ಶಿಕ್ಷಣದ ಬಗ್ಗೆ ಜ್ಞಾನದ ಕೊರತೆ, ಶಿಥಿಲಗೊಂಡ ಕೊಠಡಿಗಳು ಹಾಗೂ ಶಿಕ್ಷಕರ ಕೊರತೆಯನ್ನು ಸಮಸ್ಯೆಗಳನ್ನು ಎದುರಿಸಲಾಯಿತು.

### ಶಾಲೆಯಲ್ಲಿ ಕೈಗೊಂಡ ನಾವೀನ್ಯತೆ ಚಟುವಟಿಕೆಗಳು

1. ಗ್ರಾಮದ ಪೋಷಕರು, ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸುವಂತೆ ಪ್ರೇರೇಪಿಸುವುದು.
2. ವಾರದಲ್ಲಿ ಒಂದು ದಿನ ಸ್ಪೋಕನ್ ಇಂಗ್ಲೀಷ್ ತರಗತಿಗಳನ್ನು ನಡೆಸುವುದು.
3. ಒಂದನೇ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣದ ಜ್ಞಾನವನ್ನು ಮಕ್ಕಳಿಗೆ ಮೂಡಿಸುತ್ತಿರುವುದು.
4. ಖಾಸಗಿಯಾಗಿ ಉತ್ತಮ ಶಿಕ್ಷಕಿಯನ್ನು ನೇಮಕ ಮಾಡಿಕೊಂಡು, ಕಂಪ್ಯೂಟರ್ ಶಿಕ್ಷಣ ಮತ್ತು ಇಂಗ್ಲೀಷ್ ಭಾಷೆ ಕಲಿಕೆಗೆ ಒತ್ತು ನೀಡಿದ್ದೇವೆ.
5. ಸ್ಮಾರ್ಟ್ ತರಗತಿಗಳನ್ನು ಪ್ರಾರಂಭಿಸಿ ಮಕ್ಕಳಿಗೆ ಬೋಧಿಸುತ್ತಿರುವುದು.
6. ಶಾಲಾ ಹಳೆಯ ವಿದ್ಯಾರ್ಥಿಗಳಿಂದ "ಶಾಲಾ ಪೋಷಣ ಸಮಿತಿ"ಯನ್ನು ರಚನೆ ಮಾಡಿಕೊಂಡು ಶಾಲೆಯ ಅಭಿವೃದ್ಧಿಗೆ ಸಹಕಾರ ಪಡೆಯಲಾಗುತ್ತಿದೆ.
7. ಶಾಲಾ ಆವರಣದಲ್ಲಿ ಬಿಸಿಯೂಟಕ್ಕೆ ಬೇಕಾದ ತರಕಾರಿಗಳನ್ನು ಬೆಳೆಯಲಾಗುತ್ತಿದೆ.
8. ಶಾಲಾ ಮುಂಭಾಗದಲ್ಲಿನ ಪರಿಸರ ಸುಂದರವಾಗಿ ಕಾಣಲು ಹಾಗೂ ಕಲಿಕೆಗೆ ಪ್ರೇರೇಪಿಸಲು ಹೂಗಿಡಗಳನ್ನು ಬೆಳೆಸಲಾಗಿದೆ.
9. ಶಾಲಾ ಆವರಣದಲ್ಲಿ ಕಲ್ಪವೃಕ್ಷಗಳನ್ನು ಪೋಷಣೆ ಮಾಡಿ ಅವುಗಳಿಂದ ದೊರಕುವ ತೆಂಗಿನಕಾಯಿಗಳನ್ನು ಬಿಸಿಯೂಟಕ್ಕೆ ಬಳಸಲಾಗುತ್ತಿದೆ.
10. ಮಕ್ಕಳಲ್ಲಿ ಉಳಿತಾಯ ಮನೋಭಾವನೆ ಮೂಡಿಸಲು ಶಾಲಾ ವಿದ್ಯಾರ್ಥಿಗಳ 'ಬ್ಯಾಂಕ್" ತೆರೆದು
11. ಕಾರ್ಯ ನಿರ್ವಹಿಸಲಾಗುತ್ತಿದೆ.
12. ಮಕ್ಕಳಲ್ಲಿ 'ಸಾಂಸ್ಕೃತಿಕ ಜ್ಞಾನ' ಹೆಚ್ಚಿಸಲು ತಿಂಗಳಿಗೊಮ್ಮೆ ಸಾಂಸ್ಕೃತಿಕ ಚಟುವಟಿಕೆಗಳನ್ನು
13. ನಡೆಸಲಾಗುತ್ತಿದೆ.

ಗೈರು ಹಾಜರಾದ ಮಕ್ಕಳ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕರೆತರಲಾಗುತ್ತಿದೆ. ಮಕ್ಕಳ ಕಲಿಕೆಗೆ ಉತ್ತೇಜಿಸಲು ಧಾನಿಗಳಿಂದ ಪ್ರೋತ್ಸಾಹ ಧನ ಪಡೆದು ಮಕ್ಕಳಿಗೆ ನೀಡಲಾಗುತ್ತಿದೆ. ಶಾಲಾ ಅಭಿವೃದ್ಧಿ ಕೆಲಸಗಳಲ್ಲಿ ಪೋಷಕರನ್ನು ಬಳಸಿಕೊಂಡು ಶಿಕ್ಷಣದ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಪೋಷಕರೊಂದಿಗೆ ಮಕ್ಕಳ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಿಕೊಂಡು ಶಾಲಾ ಮತ್ತು ಪೋಷಕರ ಭಾಂಧವ್ಯ ಹೆಚ್ಚಿಸಲಾಗಿದೆ. ಶಾಲಾ ಪೋಷಣ ಸಮಿತಿಯಿಂದ ಶಿಕ್ಷಕಿಯನ್ನು ನೇಮಕ ಮಾಡಿಕೊಂಡು ಬೋಧಿಸುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.

## ಶಾಲೆಗೆ ಕೊಡುಗೆ ನೀಡಿದ ದಾನಿಗಳು

| ಕ್ರ ಸಂ | ಹೆಸರು | ದಾನದ ವಿಧ | ಮೌಲ್ಯ |
|---|---|---|---|
| 1. | ಶ್ರೀ ಆದಿಮೂರ್ತಿ, ಹಾರೋಗೊಳಿಗೆ | ಪ್ರೋತ್ಸಾಹ ಧನ | ರೂ. 10,000 |
| 2 | ಶ್ರೀ ದಯಾನಂದ, ಸಸಿತೋಟ | ಪ್ರೋತ್ಸಾಹ ಧನ | ರೂ. 5,000 |
| 3 | ಶ್ರೀ ಪ್ರಕಾಶ, ಕಡಿದಾಳ್ | ಪ್ರೋತ್ಸಾಹ ಧನ | ರೂ. 5,000 |
| 4 | ಶ್ರೀಮತಿ ಸುಮ ಭಾಸ್ಕರ್, ಕಡಿದಾಳ್ | ಪ್ರೋತ್ಸಾಹ ಧನ | ರೂ. 3,000 |
| 5 | ಶ್ರೀ ಶ್ರೀನಿವಾಸ, ಗೋರ್‌ಗಲ್ | ಕಂಪ್ಯೂಟರ್ ಪ್ರಿಂಟರ್ | ರೂ. 10,000 |
| 6 | ಶ್ರೀ ಜಯಪ್ಪ, ಅಂದಗೆರೆ | ಪ್ರೋತ್ಸಾಹ ಧನ | ರೂ. 3,850 |
| 7 | ಶ್ರೀ ಕಡಿದಾಳ್‌ಮಂಜಪ್ಪ ಸಭಾಭವನ ಸಮಿತಿ | ಬಾವಿ ಮೋಟಾರ್ | ರೂ. 10,000 |
| 8 | ಶ್ರೀಮತಿ ರಾಜಮ್ಮ, ಸಸಿತೋಟ | ವಂತಿಕೆ | ರೂ. 5,000 |
| 9 | ಶ್ರೀಮತಿ ಸುಮಿತ್ರ ಜಗನ್ನಾಥ್,ತುಂಬಿಕೊಡಿಗೆ | ಪ್ರೋತ್ಸಾಹ ಧನ | ರೂ. 22,000 |
| 10 | ಶ್ರೀ ಸತೀಶ್ ಜೋಯ್ಸ್, ಹಾರೋಗೊಳಿಗೆ | ಲೋಟ (100) ತಟ್ಟೆ (100) | ರೂ. 7,000 |
| 11 | ಶ್ರೀ ಆರ್ ಮದನ್,ತೀರ್ಥಹಳ್ಳಿ | ಬಿಸಿಯೂಟಕ್ಕೆ ತೆಂಗಿನಕಾಯಿ ಮತ್ತು ಮಿಕ್ಸಿ | ರೂ. 15,000 |
| 12 | ಶ್ರೀ ಶರತ್ ಬಿನ್ ಭಾಸ್ಕರ್, ಕಡಿದಾಳ್ | ಕಂಪ್ಯೂಟರ್ | ರೂ. 10,000 |
| 13 | ರೋಟರಿ ಸಂಸ್ಥೆ, ಶಿವಮೊಗ್ಗ | ಅಕ್ವಾಗಾರ್ಡ್ | ರೂ. 3,000 |
| 14 | ಶ್ರೀ ಉಮೇಶ್ ಜೋಯ್ಸ್, ಹಾರೋಗೊಳಿಗೆ | ಪ್ರೋತ್ಸಾಹ ಧನ | ರೂ. 5,000 |
| 15 | ಶ್ರೀಮತಿ ವನಮಾಲ ಪಟೇಲ್,ಹಾರೋಗೊಳಿಗೆ | ಠೇವಣಿ | ರೂ. 10,000 |
| 16 | ಸಾರ್ವಜನಿಕ ವಂತಿಕೆ | ಠೇವಣಿ | ರೂ. 20,000 |
| 17 | ಶ್ರೀ ಅನಂತ್‌ರಾಜ್, ಹರಳಿಮಠ | ನೋಟ್ ಬುಕ್ಸ್ | ರೂ. 5,000 |
| 18 | ಅವಿರತ ಸಂಸ್ಥೆ, ಬೆಂಗಳೂರು | ನೋಟ್ ಬುಕ್ಸ್ | ರೂ. 15,000 |
| 19 | ಕು. ನಿಶ್ಚಿತ, ಸಸಿತೋಟ | ಪ್ರೋತ್ಸಾಹ ಧನ | ರೂ. 1,000 |
| 20 | ಶ್ರೀಮತಿ ಭೂದೇವಿ ಮತ್ತು ಮಕ್ಕಳು, ಕಡಿದಾಳ್ | ವಂತಿಕೆ | ರೂ. 5,000 |

ಮಕ್ಕಳ ಕಲಿಕಾ ಹಿತದೃಷ್ಟಿಯಿಂದ ತಿಂಗಳಲ್ಲಿ ಎರಡು ಶನಿವಾರ ಪೂರ್ಣ ದಿನದ ತರಗತಿಗಳನ್ನು ನಡೆಸುವುದು. ಶಾಲಾ ಅವಧಿಯ ನಂತರ, ದಾನಿಗಳಿಂದ ಧನ ಸಂಗ್ರಹಿಸಿ ಶಾಲಾ ಭೌತಿಕ ಪರಿಸರವನ್ನು ಸುಂದರವಾಗಿ ಮಾಡುವುದು ನಮ್ಮ ಉದ್ದೇಶವಾಗಿದೆ. ಪ್ರತಿ ಮಗುವೂ ಕಲಿಕೆಯಲ್ಲಿ ಕನಿಷ್ಠ ಕಲಿಕೆಯನ್ನು ಮಾಡುವಲ್ಲಿ ಕ್ರಮವಹಿಸಲಾಗಿದೆ.





















ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಹಾರೋಗೊಳಿಗೆ




ನಮ್ಮೂರ ಜ್ಞಾನಮಂದಿರ

